**ಇಂದು ದಿನಾಂಕಃ 20-09-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಎದುರುದಾರರ ಪರವಾಗಿ ಶ್ರೀ MSS ವಕೀಲರಿಂದಃ-**

ನಾನು SSLC ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ದಿನಾಂಕಃ 22-07-2022 ರಂದು ಈ ನ್ಯಾಯಾಲಯ ಅಸಲು ದಾವೆಯಲ್ಲಿ ತಡೆಯಾಜ್ಞೆ ನೀಡಿರುತ್ತದೆ. ಸದರಿ ತಡೆಯಾಜ್ಞೆಯನ್ನು ಸಂಬಂಧಪಟ್ಟ ಉಪನೊಂದಣಾಧಿಕಾರಿಗಳಿಗೆ ನೀಡಿದ್ದೇನೆ. ಯಾವ ದಿನಾಂಕದಂದು ಸದರಿ ತಡೆಯಾಜ್ಞೆಯನ್ನು ಸಂಬಂಧಪಟ್ಟ ಉಪನೊಂದಣಾಧಿಕಾರಿಗಳಿಗೆ ನೀಡಿರುವ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು 9ನೇ ತಿಂಗಳಲ್ಲಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಉಪನೊಂದಣಾಧಿಕಾರಿಗಳಿಗೆ ಸಲ್ಲಿಸಿರುವ ತಡೆಯಾಜ್ಞೆ ಬಗ್ಗೆ ಉಪನೊಂದಣಾಧಿಕಾರಿಗಳು ನೀಡಿರುವ ಹಿಂಬರಹ ಮತ್ತು ರಶೀದಿಯನ್ನು ನಾನು ಪಡೆದಿದ್ದೇನೆ ಮತ್ತು ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದೇನೆ.

ತಡೆಯಾಜ್ಞೆ ನೀಡಿದ ನಂತರ ದಿನಾಂಕ 23-08-2022 ರಂದು ಪ್ರತಿವಾದಿಗಳಿಗೆ ಹಾಜರಾಗಲು ನ್ಯಾಯಾಲಯ ದಿನಾಂಕ ನೀಡಿತ್ತು. ಪ್ರತಿವಾದಿಗಳಿಗೆ ನೋಟಿಸ ಮತ್ತು ತಡೆಯಾಜ್ಞೆ ಮುಟ್ಟುವವರೆಗೆ ಅವರಿಗೆ ತಡೆಯಾಜ್ಞೆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಿನಾಂಕಃ 14-08-2022 ಅಥವಾ 15-08-2022 ರಂದು ಪ್ರತಿವಾದಿಗಳಿಗೆ ನ್ಯಾಯಾಲಯದ ನೋಟಿಸ ಮತ್ತು ತಡೆಯಾಜ್ಞೆ ತಲುಪಿರಬಹುದು.

ನಾನು ಪೋಲಿಸ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕಾರಣ ಯಾವ ದಿನಾಂಕದಂದು ನ್ಯಾಯಾಲಯದ ಸಮನ್ಸ ಜಾರಿ ಅಥವಾ ನಜಾರೆ ಆಗುವ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ನೋಟಿಸ ಜಾರಿಯಾದರೆ ಸಂಬಂಧಪಟ್ಟ ಸಿಬ್ಬಂದಿ ನ್ಯಾಯಾಲಯಕ್ಕೆ ಜಾರಿಯಾಗಿರುವ ಬಗ್ಗೆ ವರದಿ ನೀಡಿರುತ್ತಾರೆ ಎಂದರೆ ಸರಿ. ನಿಪಿ-8 ರ ದಾಖಲೆಯಲ್ಲಿ ದಿನಾಂಕಃ 22-08-2022 ರಂದು ತಡೆಯಾಜ್ಞೆ, ನೋಟಿಸ ಹಾಗೂ ಸಮನ್ಸ ಪ್ರತಿಗಳನ್ನು ಪ್ರತಿವಾದಿಗಳಿಗೆ ತಲುಪಿದ ಬಗ್ಗೆ ವರದಿ ಇದೆ ಎಂದರೆ ಸರಿ. ಅದೇ ರೀತಿ ದಿನಾಂಕಃ 22-08-2022 ರಂದು ಪ್ರತಿವಾದಿಗಳಿಗೆ ತಡೆಯಾಜ್ಞೆ, ನೋಟಿಸ ಹಾಗೂ ಸಮನ್ಸ ಪ್ರತಿಗಳನ್ನು ಪ್ರತಿವಾದಿಗಳಿಗೆ ನೀಡಿ ಅವರ ಸಹಿ ಪಡೆದು ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ನ್ಯಾಯಾಲಯದ ಆದೇಶದ ಪ್ರತಿಯನ್ನು ಉಪನೊಂದಣಾಧಿಕಾರಿಗಳಿಗೆ ನೀಡಿದಾಗ ಸಂಬಂಧಪಟ್ಟ ಆಸ್ತಿಯ ನೊಂದಣಿ ಮಾಡುವುದಿಲ್ಲ ಎಂದರೆ ಸರಿ.

ದಿನಾಂಕಃ 22-07-2022 ರಿಂದ 22-08-2022 ರವರೆಗೆ ನಾನು ಉಪನೊಂದಣಾಧಿಕಾರಿಗಳಿಗೆ ತಡೆಯಾಜ್ಞೆಯನ್ನು ನೀಡಿದಂತಹ ಯಾವುದೇ ಹಿಂಬರಹ ಮತ್ತು ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ದಿನಾಂಕಃ 23-08-2022 ರಂದು ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ ಎಂದರೆ ಸಾಕ್ಷಿ ಆಗಿಲ್ಲ

ಎಂದು ನುಡಿಯುತ್ತಾರೆ. ದಿನಾಂಕಃ 23-08-2022 ರಂದು ನ್ಯಾಯಾಲಯ ಮುಂದಿನ ಮುದ್ದತು ದಿನಾಂಕಃ 10-10-2022 ರಂದು ನಿಗದಿಪಡಿಸಿತ್ತು ಎಂದರೆ ಸರಿ. ನ್ಯಾಯಾಲಯದಿಂದ ತಡೆಯಾಜ್ಞೆ, ನೋಟಿಸ ಹಾಗೂ ಸಮನ್ಸ ತಲುಪುವ ಮೊದಲು ದಿನಾಂಕಃ 19-08-2022 ರಂದು ಕ್ರಯಪತ್ರ ನೊಂದಣಿ ಆಗಿರುತ್ತದೆ ಎಂದರೆ ಸಾಕ್ಷಿ ದಿನಾಂಕಃ 22-08-2022 ರ ಮೊದಲೇ ನೋಟಿಸ ತಲುಪಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕಃ 22-08-2022 ರ ಮೊದಲೇ ಪ್ರತಿವಾದಿಗಳಿಗೆ ನೋಟಿಸ ತಲುಪಿರುವ ಬಗ್ಗೆ ಯಾವುದೇ ದಾಖಲೆ ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಈ ರೀತಿ ನ್ಯಾಯಾಲಯಕ್ಕೆ ಮೇಲೆ ಹೇಳಿರುವ ದಾಖಲೆಯನ್ನು ಸಲ್ಲಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 22-08-2022 ರ ವರೆಗೆ ಪ್ರತಿವಾದಿಗಳಿಗೆ ನ್ಯಾಯಾಲಯದ ತಡೆಯಾಜ್ಞೆ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಾಹಿತಿ ಇದ್ದ ಕಾರಣವೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತಡೆಯಾಜ್ಞೆ ಬಗ್ಗೆ ದಿನಾಂಕಃ 22-08-2022 ರ ಮೊದಲು ಮಾಹಿತಿ ಇಲ್ಲದೇ ಇರುವ ಕಾರಣ ಅವರು ನ್ಯಾಯಾಲಯದ ತಡೆಯಾಜ್ಞೆಯ ಉಲ್ಲಂಘನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 23-07-2022 ರಂದು ನಾನು ಪ್ರತಿವಾದಿಗಳಿಗೆ ನ್ಯಾಯಾಲಯದ ತಡೆಯಾಜ್ಞೆಯನ್ನು ಕಳುಹಿಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಕಳುಹಿಸಿಲ್ಲ ನ್ಯಾಯಾಲಯವೇ ಕಳುಹಿಸಿರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ತಡೆಯಾಜ್ಞೆ ಬಗ್ಗೆ ನಾನು ಉಪನೊಂದಣಾಧಿಕಾರಿಗಳಿಗೆ ಮಾಹಿತಿ ನೀಡದೇ ನಿಲರ್ಕ್ಷ್ಯತನ ತೋರಿಸಿ ಪ್ರತಿವಾದಿಳಿಗೆ ತಡೆಯಾಜ್ಞೆ ಬಗೆ ಮಾಹಿತಿ ಇಲ್ಲದೇ ಇರುವ ಕಾರಣ ಪ್ರತಿವಾದಿಗಳು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸತಾಯಿಸಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**